ಬಿ.ಎನ್. ಮಂಜುನಾಥ, ಬಾಣಾವರ
*ಪ್ರೇಯಸಿಯ ಮುತ್ತಿಗೂ, ಕಡಲ ಮುತ್ತಿಗೂ ಇರುವ ವ್ಯತ್ಯಾಸವೇನು?*



ಕಡಲ ಮುತ್ತು ತಣ್ಣಗಿರುತ್ತದೆ; ಪ್ರೇಯಸಿಯ ಮುತ್ತು ಬಿಸಿಬಿಸಿ!

ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ
*ಸವಿಸವಿಯಾಗಿ ಮಾತನಾಡುವವರನ್ನೇ ಜನ ನಂಬುತ್ತಾರಲ್ಲಾ...?*
ಶನಿ ಶನಿಯಾಗಿ ಆಡುವವರನ್ನೇ ನಂಬಿ ಮತ ಹಾಕುವಾಗ ಇದೇನು ಮಹಾ ಬಿಡಿ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಹೆಂಡ ಕುಡಿಯುವ ಸಮಯದಲ್ಲಿ ಕುಡುಕರು ಖಾರದ ಪದಾರ್ಥಗಳನ್ನೇ ತಿನ್ನುವುದು ಏಕೆ?*
ಮನೆಗೆ ಹೋದಾಗ ಖಾರದ ಮಾತುಗಳನ್ನು ತಿನ್ನಬೇಕಲ್ಲ, ಅದಕ್ಕೆ ಇದು ರಿಹರ್ಸಲ್!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಮನಸ್ಸೊಂದು ಮರ್ಕಟವಂತೆ; ಆ ಮರ್ಕಟಕ್ಕೆ ಹೆಂಡ ಕುಡಿಸಿದರೆ...?*
ಕಲ್ಪನೆಯ ಪಾತಾಳ ತಲುಪಿ ಮಾಡ್ರನ್ ಸಿನೆಮಾ ನಿರ್ದೇಶಕನಾಗುತ್ತದೆ.

ಚಿಕ್ಕೋಬನಹಳ್ಳಿ ಚಾಂದ್‌ಬಾಷ, ಚಿತ್ರದುರ್ಗ
*ರಾಜಕಾರಣಿಗಳಿಗಿಂತಲೂ ಅವರ ಪತ್ನಿಯರ ವರಮಾನ ಹೆಚ್ಚಿರುವುದರ ಕಾರಣ?*



ಗಂಡ ಕೋತಿ, ಹೆಂಡತಿ ಮೇಕೆ; ತಿಂದದ್ದು ಇವನು, ಒರೆಸಿದ್ದು ಅವಳ ಮೂತಿಗೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಆಕಳಿಸುವುದಕ್ಕೂ, ತೂಕಡಿಸುವುದಕ್ಕೂ ವ್ಯತ್ಯಾಸ?*
ನಿದ್ರೆ ಎಂಬ ಕಾದಂಬರಿಗೆ ಆಕಳಿಕೆ ಪ್ರಸ್ತಾವನೆ, ತೂಕಡಿಕೆ ಮುನ್ನುಡಿ.

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಮಡಿಯವರ ನಡುವೆ ಮಿಡ್ಡಿ ಧರಿಸಿದ್ದಳೊಬ್ಬ ಹುಡುಗಿ. ಏನಂತೀರಿ?*
ಶುದ್ಧ ಅವಿವೇಕ; ಮಡಿಯವರ ಮನಸ್ಸೆಲ್ಲಾ ಮೈಲಿಗೆಯಾಗಿಹೋಯಿತು!

ಹೆಚ್.ಎಂ. ಅನಂತ ಪದ್ಮನಾಭ, ಮೈಸೂರು
*ಬಸ್ ಟಿಕೆಟ್‌ಗೂ, ಚುನಾವಣಾ ಟಿಕೆಟ್‌ಗೂ ಏನು ವ್ಯತ್ಯಾಸ?*
ಸರಿಯಾದ ಚಿಲ್ರೆ ಇದ್ರೆ ಬಸ್ ಟಿಕೆಟ್, ಸಖತ್ತಾದ ಚಿಲ್ರೆ ಆಗಿದ್ರೆ ಚುನಾವಣಾ ಟಿಕೆಟ್!

ಅನಸೂಯ ಸುದರ್ಶನ್ ಮೈಸೂರು
*ಇಲ್ಲೊಬ್ಬರು ಧಾರ್ಮಿಕ ಚಿಂತಕರು ದಿನವಡೀ ದುಡಿಸಿಕೊಂಡು ಸಂಬಳ ಕೇಳಿದರೆ 'ಕರ್ಮಣ್ಯೇವಾಧಿಕಾರಸ್ತೇ...' ಎನ್ನುವರಲ್ಲಾ...?*
ಮಾತಾ nasty, ಪಿತಾ nasty, nasty ಬಂಧುಃಸಖಾ ಮಮ' ಎಂದು ಹೆದರಿಸಿ. ಲಕ್ಷ್ಮೀಕಟಾಕ್ಷವಾಗಿ ಕುರುಕ್ಷೇತ್ರ ತಪ್ಪುತ್ತದೆ!

ಪಿ.ಜೆ. ರಾಘವೇಂದ್ರ, ಮೈಸೂರು
*ರಾಮ ಮಂದಿರ ಕಟ್ಟಬೇಕೆಂದಿದ್ದೇವೆ. ತಮ್ಮ ಒಪ್ಪಿಗೆ ಇದೆಯಾ?*
ನಮೋ ಎನ್ನುತ್ತೇನೆ; ಈ ವಿಧದ ಅಡ್ಡವಾಣಿಗಳೇ ಬೇಡ.

ವಿದ್ಯಾನಾಗ್ ಎಂ.ಆರ್. ಬೆಂಗಳೂರು
*ಬುದ್ಧಿಜೀವಿಗಳಿಗೂ, ಬುದ್ಧಿವಂತರಿಗೂ ಏನು ವ್ಯತ್ಯಾಸ?*
ತಾವೇ ಬುದ್ಧಿವಂತರು ಎಂದುಕೊಂಡು ಪೆದ್ದುಪೆದ್ದಾಗಿ ಆಡುವವರು ಬುದ್ಧಿಜೀವಿಗಳು; ಅವರಿಂದ ದೂರ ಇರುವವರು ಬುದ್ಧಿವಂತರು.

ವೀರೇಂದ್ರ ಎಂ. ಮೇಗೂರ್, ಧಾರವಾಡ
*ವಿಧವೆಗೂ, ವೇಶ್ಯೆಗೂ ಇರುವ ವ್ಯತ್ಯಾಸ?*
ವಿಧವೆ ಮುಕ್ಕಾದ ಶಿಲ್ಪ, ವೇಶ್ಯೆ ಹಾಸುಗಲ್ಲು.

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ವಯೋವೃದ್ಧರು ಜ್ಞಾನವೃದ್ಧರೂ ಆಗಿರುತ್ತಾರೆ ಎನ್ನುತ್ತಾರೆ; ಅರವತ್ತಕ್ಕೆ ಅರುಳುಮರುಳು ಎನ್ನುತ್ತಾರೆ. ಯಾವುದು ಸರಿ?*
ಮತಿಯ ಲೆಕ್ಕದಲ್ಲಿ ಮೊದಲನೆಯದು ಸರಿ, ಸ್ಮೃತಿಯ ಲೆಕ್ಕದಲ್ಲಿ ಎರಡನೆಯದು ಸರಿ.

ಕೆ.ಎಂ. ಲಿಂಗರಾಜು, ನಂಜನಗೂಡು
*ದಾನಗಳಲ್ಲಿ ಮತದಾನದ ಸ್ಥಾನವೇನು?*
ಸ್ಲಂಗಳಲ್ಲಿ ಮೊದಲ ಸ್ಥಾನ; ವಿದ್ಯಾವಂತ ದಡ್ಡರ ಮನೆಗಳಲ್ಲಿ ಕೊನೆಯ ಸ್ಥಾನ.

## ಬಹುಮಾನಿತ ಪ್ರಶ್ನೆ

ಎನ್.ಎಸ್. ಆನಂದ, ಬೆಂಗಳೂರು
*ಹೊಟ್ಟೆ ಬೆಳೆದಷ್ಟು ಸುಲಭವಾಗಿ ತಲೆ ಏಕೆ ಬೆಳೆಯುವುದಿಲ್ಲ ಸಾರ್?*
ಹೊಟ್ಟೆಗೆ ಕೊಡುವಷ್ಟು ಪುಷ್ಟಿಯನ್ನು ತಲೆಗೆ ಕೊಡುವುದಿಲ್ಲವಲ್ಲ!

ಎ.ಕೆ. ಪಟ್ಟಾಭಿ, ಬೆಂಗಳೂರು
*ನೆರೆಮನೆಯವರಿಗಿಂತ ದೂರದಲ್ಲಿರುವವರೇ ನಮಗೆ ಹೆಚ್ಚು ಆಪ್ತರಾಗುತ್ತಾರಲ್ಲಾ...?*
ದೂರದಲ್ಲಿರುವವರ ಕಾಂಪೌಂಡಿಗೆ ನೀವೇನೂ ಕಸ ಎಸೆಯುವುದಿಲ್ಲವಲ್ಲ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಸ್ವಯಂವರದಲ್ಲಿ ತನ್ನನ್ನು ಗೆದ್ದ ಅರ್ಜುನ ಸುಭದ್ರೆಯನ್ನು ಕರೆತಂದಾಗ ದ್ರೌಪದಿಗೆ ಏನನ್ನಿಸಿರಬಹುದು?*
'ಸದ್ಯ! ಐದು ಜನರಲ್ಲಿ ಒಬ್ಬನ ಕಾಟ ಕಡಿಮೆಯಾಯಿತು' ಎನ್ನಿಸಿರಬೇಕು.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಗಂಡಸರು ಸೆಖೆ ಜಾಸ್ತಿಯಾದರೆ ಬನೀನು ಬಿಚ್ಚಿಹಾಕಿ ಗಾಳಿ ಬೀಸಿಕೊಳ್ಳುತ್ತಾರೆ. ಹೆಂಗಸರು?*



ಅತ್ತೆಯನ್ನು ಜ್ಞಾಪಿಸಿಕೊಳ್ಳುತ್ತಾರೆ; ಆ ಕಾವಿನ ಮುಂದೆ ಈ ಸೆಖೆ ತಂಪಾಗುತ್ತದೆ!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ
ಹುಡುಗಿಯ ಉಡುಪು ಕೈಗೆ ಸಿಕ್ಕಿ ಹುಡುಗಿಯೇ ಸಿಕ್ಕಿದಂತಾಯಿತು...?
ಚಿಂತಿಸಬೇಡಿ; ಇಂತಹ ಭ್ರಮೆಗೆ ಬೆಂಗಳೂರು ಮತ್ತು ಧಾರವಾಡದಲ್ಲಿ ಚಿಕಿತ್ಸಾ ಕೇಂದ್ರಗಳಿವೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸಿರಿಗನ್ನಡವನ್ನು ಸಮರ್ಥವಾಗಿ ಬಳಸಿ ಉತ್ತರ ನೀಡುವ ನಿಮಗೆ ಯಾವ ಬಿರುದು ನೀಡಲಿ ರಾಂಜಿ?*
ಬಿರುದಿನ ಸಹವಾಸವೇ ಬೇಡ; ಬಿದುರು ಏರುವವರೆಗೆ ಹಿತೈಷಿಗಳಾಗಿಯೇ ಇದ್ದರೆ ಅದಕ್ಕಿಂತ ಶ್ರೇಷ್ಠ ಸನ್ಮಾನವಿಲ್ಲ.

■ ರಾಮ್